ಬಯಲುಸೀಮೆ ಅಭಿವೃದ್ಧಿ

೩೨೨(೩೨೭೪)

ಶ್ರೀ ಪಾಟೀಲ್ ಡಿ.ಆರ್.ಪಾಟೀಲ್(ಗದಗ್): ಮಾನ್ಯ ಮಾನುಗಾರಿಕೆ, ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ನಿಗಮದಿಂದ ಗದಗ ಜಿಲ್ಲೆಯಲ್ಲಿ ನಬಾರ್ಡ್ ಹಣಕಾಸು ಸಹಾಯದಿಂದ ಯಾವ ಯಾವ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲಾಗುವುದು?

ಆ) ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು?

ಇ) ಈ ಕಾಮಗಾರಿಗಳಿಗೆ ನಬಾರ್ಡ್‌ದಿಂದ ಮಂಜೂರಾತಿ ದೊರೆತಿದೆಯೇ?

ಈ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕಾಲಮಿತಿ ನಿಗದಿಗೊಳಿಸಲಾಗಿದೆಯೇ?

ಶ್ರೀ ಬಿ.ರಮಾನಾಥ ರೈ (ಮಾನುಗಾರಿಕೆ ಬಂದರು ಹಾಗೂ ಪ್ರದೇಶಾಭಿವೃದ್ಧಿ ಸಚಿವರು):

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಿಂದ ನಬಾರ್ಡ್ ಕಾರ್ಯಕ್ರಮದಡಿಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲು ಅನುಬಂಧ 'ಂ'ರಲ್ಲಿ ತೋರಿಸಿರುವ ೧೧ ಕಾಮಗಾರಿಗಳನ್ನು ಸಚಿವ ಸಂಪುಟದ ಉಪ ಸಮಿತಿಯು ಅನುಮೋದನೆ ನೀಡಿದ್ದು, ಈ ಕಾಮಗಾರಿಗಳ ಅಂದಾಜು ವೆಚ್ಚಗಳನ್ನು ನಬಾರ್ಡ್ ಸಂಸ್ಥೆಗೆ ಕಳುಹಿಸಲಾಗಿದ್ದು, ನಬಾರ್ಡ್ ಸಂಸ್ಥೆಯ ಅನುಮೋದನೆಯ ನಂತರ ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.

ಆ) ಅನುಬಂಧ ಂ ರಲ್ಲಿ ನೀಡಲಾಗಿದೆ.

ಇ) ದೊರಕಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಅನುಬಂಧ

ಸಚಿವ ಸಂಪುಟದ ಉಪ ಸಮಿತಿಯಿಂದ ಅನುಮೋದನೆಗೊಂಡ ಕಾಮಗಾರಿಗಳ ವಿವರ

ಕ್ರ. ಸಂ.	ಕ್ಷೇತ್ರ	ಕಾಮಗಾರಿಗಳ ಹೆಸರು	ಯೋಜನೆ	ಅಂದಾಜು ಮೊತ್ತ	ಷರ
೧.	ಗದಗ್	೧) ಬೆಟಗೇರಿ ಮತ್ತು ಚಿಕ್ಕೊಪ್ಪ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು	ಶೇ.೬೦	೧೦.೦೦	
		೨) ಚಿಕ್ಕೊಪ್ಪ-ಹೊಂಬಳ ರಸ್ತೆ ಕಿಮೀ ೦.೦೨ ರಿಂದ ೫.೨೦, ಗದಗ್-ಬಳಗಾನೂರ ರಸ್ತೆವರೆಗೆ ರಸ್ತೆ ನಿರ್ಮಾಣ.	ಶೇ ೪೦	೪೦.೦೦	
		ಒಟ್ಟು		೫೦.೦೦	
೨.	ರೋಣ	೧) ನಾಗರಸಿಕೊಪ್ಪ ಸಣ್ಣ ನೀರಾವರಿ ಕೆರೆ ಸುಧಾರಣೆ.	ಶೇ ೬೦	೧೦.೦೦	
		೨) ಓರೇಹಳ್ಳ-ಬಳಗೋಡ್ ಶಾಂತಿಗೇರಿ ರಸ್ತೆ ಸುಧಾರಣೆ	ಶೇ ೪೦	೪೦.೦೦	
		ಒಟ್ಟು		೫೦.೦೦	
೩.	ಶಿರಹಟ್ಟಿ	೧) ಇಟಗಿ ಎತ್ತು ನೀರಾವರಿ ಕಾಲುವೆ ಸುಧಾರಣೆ ಕೆಲಸ	ಶೇ ೬೦	೩೦.೦೦	
		೨) ಬನ್ನಿಕೊಪ್ಪದಿಂದ ತಾರೀಕೊಪ್ಪದವರೆಗೆ ರಸ್ತೆ ಸುಧಾರಣೆ ಕಿಮೀ ೩.೫೦	ಶೇ ೪೦	೨೦.೦೦	
		ಒಟ್ಟು		೫೦.೦೦	

೪.	ಮುಂಡರಗಿ	೧) ನಬ್ಬಾಪುರ ಜಲಾನಯನ ಅಭಿವೃದ್ಧಿ ಕಾಮಗಾರಿಗಳು	ಶೇ ೬೦	೧೦.೦೦
		೨) ಜಂತ್ಲಿ ಶಿರೂರದಿಂದ-ಹರ್ಲಾಪುರದವರೆಗೆ ಸುಧಾರಣೆ.	ಶೇ ೪೦	೪೫.೦೦
		ಒಟ್ಟು		೫೫.೦೦
೫.	ನರಗುಂದ	೧) ದಂಡಾಪುರ ನಾಲಾ ಜಲಾನಯನ ಅಭಿವೃದ್ಧಿ ಕಾಮಗಾರಿ	ಶೇ ೬೦	೧೫.೦೦
		೨) ಸೋಮನಕಟ್ಟಿ ಜಲಾನಯನ ಅಭಿವೃದ್ಧಿ ಕಾಮಗಾರಿಗಳು	"	೧೪.೦೦
		೩) ಕುರುವಿನಕೊಪ್ಪದಿಂದ ತಿಮ್ಮಿನಹಾಳ ರಸ್ತೆ ನಡುವೆ ಎಂ.ಸಿ.ಪಿ.ಸಿ. ನಿರ್ಮಾಣ	ಶೇ ೪೦	೨೬.೦೦
		ಒಟ್ಟು		೫೫.೦೦

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಕೊಟ್ಟಿರುವಂತಹ ಉತ್ತರದಲ್ಲಿ ನಬಾರ್ಡ್ ಸಂಸ್ಥೆಯ ಅನುಮೋದನೆಗಾಗಿ ಕಳುಹಿಸಿದ್ದೇವೆ. ಅಲ್ಲಿಂದ ಇನ್ನೂ ಮಂಜೂರಾಗಿಲ್ಲವೆಂದು ಹೇಳಿದ್ದಾರೆ. ಸುಮಾರು ಒಂದು ವರ್ಷದಿಂದ ಇದು ನಬಾರ್ಡ್‌ಗೆ ಹೋಗಬೇಕೆಂದು ಹೇಳುವುದಾಯಿತು? ಇದು ಯಾವಾಗ ಮಂಜೂರಾಗುತ್ತದೆ ಎಂಬುದನ್ನು ಹೇಳಬೇಕು?

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಒಂದು ವರ್ಷವೇನೂ ಆಗಿಲ್ಲ. ಈ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿಯ ಕಾರ್ಯಕ್ರಮಗಳನ್ನು ನಬಾರ್ಡ್ ಯೋಜನೆಗೆ ಸೇರಿಸಬೇಕೆಂದು ಬಹಳ ಸದಸ್ಯರ ಅಪೇಕ್ಷೆ ಇತ್ತು ಹಾಗೂ ಈ ಬಯಲುಸೀಮೆ ಮಂಡಲಿಯನ್ನು ಯೋಜನಾ ಖಾತೆಗೆ ಸೇರಿಸಿ ಪ್ರತಿಯೊಂದು ಕ್ಷೇತ್ರದಿಂದ ಕೆಲವು ಪ್ರಸ್ತಾವನೆಗಳನ್ನು ಕಳುಹಿಸತಕ್ಕಂಥ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಾವು ಈಗಾಗಲೇ ಅದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿಯಿಂದ ಒಪ್ಪಿಗೆಯನ್ನು ಪಡೆದುಕೊಂಡು ಸಂಬಂಧಪಟ್ಟ ತಾಲ್ಲೂಕಿನ ಅನುಷ್ಠಾನ ಅಧಿಕಾರಿಗಳು ಯಾವ ರೀತಿಯಲ್ಲಿ ಎಸ್ಟಿಮೇಟ್‌ಗಳನ್ನು ತಯಾರು ಮಾಡಿ ಕಳುಹಿಸಿಕೊಡುತ್ತಿದ್ದಾರೆ, ಅದನ್ನು ನಬಾರ್ಡ್‌ಗೆ ನಾವು ಕಳುಹಿಸಿಕೊಡುತ್ತಿದ್ದೇವೆ. ಆದಷ್ಟು ಎಲ್ಲಾ ಎಸ್ಟಿಮೇಟ್‌ಗಳನ್ನು ಶೀಘ್ರದಲ್ಲೇ ಕಳುಹಿಸಿಕೊಡುವಂತಹ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಈ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಹೆಸರಿಗೆ ಮಾತ್ರ ಅಷ್ಟೇ ಇರುವುದು. ಅದಕ್ಕೆ ಏಕೆ ಮಂತ್ರಿಗಳಿದ್ದಾರೋ ಗೊತ್ತಿಲ್ಲ. ತಮ್ಮ ವಜನ್ ಮಾತ್ರ ಬಹಳ ಇದೆ, ಆದರೆ ನಾವು ಕೇಳುತ್ತಿರುವ ವಿಚಾರದ ಮೇಲೆ ಅಷ್ಟು ವಜನ್ ಬೀಳುತ್ತಿಲ್ಲ. ಇಲ್ಲಿಯವರೆಗೆ ಬೀಡು ವರ್ಷವಾಯಿತು, ಹೊಸ ಸರ್ಕಾರ ಬಂದಮೇಲೆ ಈ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿಯಿಂದ ಒಂದೊಂದು ಕ್ಷೇತ್ರಕ್ಕೆ ೨ರಿಂದ ಎರಡೂವರೆ ಲಕ್ಷ ರೂಪಾಯಿ ಸಹ ಬಂದಿಲ್ಲ. ಈ ಬಯಲುಸೀಮೆ ಮಂಡಲಿ ಏಕೆ ಬೇಕು? ಒಂದೊಂದು ಕೋಟಿ ರೂಪಾಯಿಯ ಕ್ರಿಯಾಯೋಜನೆ ಎಲ್ಲಾ ಕಡೆ ತೆಗೆದುಕೊಂಡಿರಿ. ಆದರೆ ಇವತ್ತಿನವರೆಗೂ ಒಂದು ಕಾಮಗಾರಿಗೂ ಸಹ ಸ್ಯಾಂಕ್ಷನ್ ಆಗಿಲ್ಲ. ನಮ್ಮ ಹತ್ತಿರ ಯಾವಾಗಲೂ ಕ್ಯಾಬಿನೆಟ್ ಸಬ್‌ಕಮಿಟಿ ಒಪ್ಪಿಗೆ ತೆಗೆದುಕೊಂಡಿದೆ, ನಬಾರ್ಡ್‌ಗೆ ಕಳುಹಿಸಿದ್ದೇವೆ ಎಂದು ನೀವ ಹೇಳುವುದೇ ಆಗಿದೆ. ಆದರೆ ನಬಾರ್ಡ್ ಹಣ ಬರುತ್ತದೋ ಇಲ್ಲವೊ? ನೀವು ಮಾಡುತ್ತೀರೋ? ಇದು ಯಾವ ಹಂತದಲ್ಲಿದೆ? ಅದು ಆದಷ್ಟು ಬೇಗ ಆಗಬೇಕೆಂದು ಹೇಳುತ್ತೇನೆ. ಹಿಂದಿನ ಸರ್ಕಾರ ಇದ್ದಾಗ ಕೂಡ ನಾವು ಬೇಡಿಕೆ ಮಾಡಿದ್ದೇವೆ, ೨೫ರಿಂದ ೩೦ ಲಕ್ಷ ರೂಪಾಯಿಗಳನ್ನು ಒಂದೊಂದು ಕ್ಷೇತ್ರಕ್ಕೆ ಬಜೆಟ್ ಕೊಡಿ ಎನ್ನುವ ಒತ್ತಾಯವನ್ನು ಮಾಡೋಣ. ಮಾನ್ಯ ಅಧ್ಯಕ್ಷರೆ,

ನಾವು ನಿಮ್ಮ ಜೊತೆ ಬರುತ್ತೇವೆ, ಈಗಲೂ ಕೂಡ ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡೋಣ. ನಮ್ಮ ಅಧ್ಯಕ್ಷರು ಬಯಲುಸೀಮೆಯಿಂದ ಬಂದವರಾಗಿದ್ದಾರೆ, ಅವರೂ ಬರುತ್ತಾರೆ. ಪ್ರತಿವರ್ಷ ಅವರು ಹೇಳುವುದೇ ಆಗಿದೆ, ಇಂತಹ ಪ್ರಶ್ನೆಗಳು ಬಂದಾಗ ಗಲಾಟೆ ಮಾಡುವುದಾಗಿದೆ. ಆದರೆ ಏನೂ ಕೆಲಸವಾಗುತ್ತಿಲ್ಲ. ಈ ಕಡೆಯ ಶಾಸಕರಿಗೆ ಅನುದಾನ ಈ ಬಾರಿ ಮಾಡುತ್ತೇವೆ, ೨೫ ಲಕ್ಷ ರೂಪಾಯಿಯಲ್ಲಿ ಹನ್ನೆರಡೂವರೆ ಲಕ್ಷ ರೂಪಾಯಿಯ ಒಂದು ಕಂತು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಐದು ವರ್ಷವಾಯಿತು, ಅದು ಇನ್ನೂ ಬರಲಿಲ್ಲ. ಕೇವಲ ಕಾಯುವುದೇ ಆಯಿತು. ಕೊನೆಗೆ ಬಯಲುಸೀಮೆ ಮಂಡಲಿಯಿಂದ ಏನಾದರೂ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಎಂದರೆ ಅಲ್ಲೂ ಕೂಡ ಒಂದು ಪೈಸೆ ಇಲ್ಲ. ಈ ಬಯಲುಸೀಮೆ ಅಭಿವೃದ್ಧಿ ಮಂಡಲಿಯನ್ನು ರದ್ದು ಮಾಡೋಣ. ನಮ್ಮ ಕ್ಷೇತ್ರದ ಮತದಾರರಿಗೆ, ನಾವು ಇದನ್ನು ಮಾಡಿಸಿಕೊಡುತ್ತೇವೆಂದು ಹೇಳುತ್ತೇವೆ. ಇವರು ಪ್ರತಿವರ್ಷ ಕ್ರಿಯಾಯೋಜನೆಗೆ ಕಳುಹಿಸುತ್ತೇವೆ, ಪ್ರತಿವರ್ಷ ಕಾಮಗಾರಿಗೆ ಕಳುಹಿಸುತ್ತೇವೆ ಎಂದು ಹೇಳುತ್ತಾರೆ, ಆದರೆ ಏನೂ ಇಲ್ಲ. ಆದುದರಿಂದ ಮಾನ್ಯ ಅಧ್ಯಕ್ಷರೆ, ತಾವೂ ಸಹ ಇದರ ಬಗ್ಗೆ ಸರ್ಕಾರದ ಕಿವಿಯನ್ನು ಹಿಂಡುವಂತಹ ಒಂದು ಕೆಲಸವನ್ನು ಮಾಡಬೇಕು. ಇದಕ್ಕೆ ಬಜೆಟ್‌ನ್ನು ಕೊಡಿಸುವಂತಹ ವಿಚಾರವಾಗಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಬಿ.ರಮಾನಾಥ ರೈ: ಈ ವರ್ಷ ಈ ಯೋಜನೆಯನ್ನು ನಬಾರ್ಡ್‌ಗೆ ಕಳುಹಿಸುವಂತಹ ಕೆಲಸವನ್ನು ಮಾಡಿದ್ದೇವೆ. ಇಲ್ಲಿಯವರೆಗೆ ನಾವು ಕಳುಹಿಸಿಕೊಟ್ಟಿಲ್ಲ. ಅದನ್ನು ಮಾಡಲು ತರಬಹುದಾಗಿತ್ತು. ಆದರೆ ನಬಾರ್ಡ್‌ಗೆ ಕಳುಹಿಸುವುದಕ್ಕೆ ಕ್ಯಾಬಿನೆಟ್ ಸಬ್ ಕಮಿಟಿಯಿಂದ ಮಂಜೂರು ಮಾಡಿಸಿದ್ದು ಈ ವರ್ಷ ಮಾತ್ರ. ಇದರ ಬಗ್ಗೆ ಬಹಳಷ್ಟು ವರ್ಷದಿಂದ ಒತ್ತಡ ಇರಬಹುದು. ಆದರೆ ಈ ವರ್ಷ ಮಾತ್ರ ನಾವು ೪೪ ಕೋಟಿ ರೂಪಾಯಿಗೆ ಉಪಸಮಿತಿಯ ಒಪ್ಪಿಗೆಯನ್ನು ಪಡೆದುಕೊಂಡಿದ್ದೇವೆ. ಆದುದರಿಂದ ಈ ವರ್ಷದಿಂದ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿಯ ಕಾರ್ಯಕ್ರಮಗಳಿಗೆ ನಬಾರ್ಡ್ ಯೋಜನೆಗೆ ಕಳುಹಿಸಿಕೊಡಲಾಗತ್ತಿದೆ. ಮತ್ತು ನಾವು ಅದನ್ನು ಕಾರ್ಯಗತಗೊಳಿಸುವುದು ಹೇಗೆಂದರೆ ಸಂಬಂಧಪಟ್ಟ ತಾಲ್ಲೂಕಿನ ಜಿಲ್ಲಾಪಂಚಾಯಿತಿಗಳ ಮೂಲಕ ಎಂಜಿನಿಯರುಗಳು ಎಸ್ಟಿಮೇಟ್ ಮಾಡಿ, ಅದು ಬಯಲುಸೀಮೆ ಮಂಡಲಿಗೆ ಬಂದನಂತರ ಅದನ್ನು ನಬಾರ್ಡ್‌ಗೆ ಕಳುಹಿಸಿಕೊಡುತ್ತೇವೆ. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ಇರಬಹುದು, ಮಲೆನಾಡು ಪ್ರದೇಶ ಅಭಿವೃದ್ಧಿ ಮಾಡಲಿ ಇರಬಹುದು, ಅಥವಾ ಲೋಕೋಪಯೋಗಿ ಇಲಾಖೆಯಿಂದ ನೇರವಾಗಿ ಕಳುಹಿಸುವಂತಹ ವಿಚಾರ ಇದ್ದರೆ, ಅವರ ಗೈಡ್‌ಲೈನ್ಸ್ ಏನಿದೆ ಅದೇ ರೀತಿ ಕಳುಹಿಸಿ, ಅದಕ್ಕೆ ಅಲ್ಲಿಂದ ಮಂಜೂರಾತಿ ಆಗಿ

ಬರುವಂತಹ ವ್ಯವಸ್ಥೆ ಇದೆ.

ಶ್ರೀ ಬಿ.ಆರ್.ಯಾವಗಲ್: ಮಾನ್ಯ ಅಧ್ಯಕ್ಷರೆ, ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವ್ಯಾಪ್ತಿಯಲ್ಲಿ ಒಂದು ವರ್ಷದ ಕೆಳಗೆ ನಮ್ಮ ತಾಲ್ಲೂಕನ್ನು ಸೇರಿಸಲಾಯಿತು. ಮಾನ್ಯ ಶೆಟ್ಟರ್‌ರವರು ಹೇಳಿದ ಹಾಗೆ ಸೇರಿಸಿಕೊಂಡಾಗಿನಿಂದ ಇಲ್ಲಿಯವರೆಗೂ ಆ ಅಭಿವೃದ್ಧಿ ಮಂಡಲಿಯಿಂದ ಒಂದು ಪೈಸೆ ಕೂಡ ಕೊಡುವುದಕ್ಕೆ ಸಾಧ್ಯವಾಗಿಲ್ಲ. ಪ್ರತಿಸಲ ಎಸ್ಟಿಮೇಟ್ ತೆಗೆದುಕೊಳ್ಳುವುದು ಹಾಗೇ ಮಾಪಸ್ಸು ಕಳುಹಿಸುವುದು ಆಗಿದೆ. ಅದರ ಜೊತೆಗೆ ಕಮ್ಯೂನಿಕೇಷನ್ ಗ್ಯಾಪ್ ಒಂದು. ಇದಕ್ಕೆ ಹೆಡ್‌ಕ್ವಾರ್ಟರ್ಸ್ ಚಿತ್ರದುರ್ಗದಲ್ಲಿದೆ. ಮೀಟಿಂಗ್‌ಗೆ ಹೋಗುವುದಕ್ಕೆ ಬಹಳ ಕಷ್ಟ. ಬಹುತೇಕ ಮಾನ್ಯ ಸಚಿವರಿಗೂ ಹೆಚ್ಚಿನ ಸಮಯ ಅದಕ್ಕೆ ಕೊಡುವುದಕ್ಕೆ ಬಹಳ ಕಷ್ಟ ಇದೆ. ಏಕೆಂದರೆ ಅವರೂ ಮಂಗಳೂರಿನಿಂದ ಬರಬೇಕು. ಹೀಗಾಗಿ ಅದು ಅಸ್ತವ್ಯಸ್ತವಾಗಿದೆ. ಆದುದರಿಂದ ಇದಕ್ಕೆ ದುಡ್ಡಿನ ಅವಶ್ಯಕತೆ ಬಹಳಷ್ಟು ಇದೆ. ಕೆಲಸವನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ೩೫ ಕೋಟಿ ರೂಪಾಯಿ ಮಲೆನಾಡು ಅಭಿವೃದ್ಧಿ ಮಂಡಲಿಗೆ ಕಳುಹಿಸಿದರೆ ಅದನ್ನು ಹೆಚ್‌ಕೆಡಿಬಿಗೆ ತೆಗೆದುಕೊಂಡರು, ವೆಸ್ಟರನ್ ಘಾಟ್ ತೆಗೆದುಕೊಂಡರು. ಆದರೆ ಇದರಲ್ಲಿ ಮಾತ್ರ ಕಡಿಮೆ ಹಣ ಕೊಡುವುದು. ಸುದೈವದಿಂದ ನಬಾರ್ಡ್‌ನಿಂದ ಬರುವಂತಹ ಹಣವನ್ನು ಕೊಡಿಸಿದ್ದಾರೆ. ಅದರಲ್ಲಿ ಸ್ವಲ್ಪ ತಾರತಮ್ಯವಾಗಿದೆ ಎಂದು ಕೇಳಿಬಂದಿದೆ. ಇದಕ್ಕೆ ಬರುವಂತಹ ಹಣವನ್ನು ಎಲ್ಲಾ ಕ್ಷೇತ್ರಗಳಿಗೂ ಸರಿಸಮವಾಗಿ ಹಂಚಬೇಕೆಂದು ಮಂಡಲಿ ಸಭೆಯಲ್ಲಿ ತೀರ್ಮಾನವಾಯಿತು. ಆದರೆ ನಮಗೆ ತಿಳಿದಂತಹ ವರದಿ ಪ್ರಕಾರ ಕೆಲವರಿಗೆ ಒಂದು ಕೋಟಿ ಎರಡು ಕೋಟಿ ರೂಪಾಯಿ ಕೊಟ್ಟಿದ್ದಾರೆ. ನಾವು ಪಾಪಿಗಳು ನಮ್ಮ ಕ್ಷೇತ್ರಕ್ಕೆ ೨೫ ಲಕ್ಷ ರೂಪಾಯಿ ಕೊಡುವುದಕ್ಕೆ ನಿರ್ಧಾರವಾಗಿದೆಯಂತೆ. ಈ ರೀತಿ ತಾರತಮ್ಯವಾಗಿದೆ ಎಂದು ತಿಳಿದುಬಂದಿದ್ದು, ದಯವಿಟ್ಟು ಆ ರೀತಿ ಮಾಡದೆ ಏನೇ ಮಂಜೂರಾತಿಯಾಗಿ ಬಂದರೂ ಅದನ್ನು ಎಲ್ಲರಿಗೂ ಸರಿಸಮಾನವಾಗಿ ಹಂಚುವುದಕ್ಕೆ ಮಾನ್ಯ ಸಚಿವರು ಕ್ರಮವನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಏನು ಹೇಳುವುದು ಬೇಕಾಗಿಲ್ಲ. ತಮಗೆ ಇದರ ಬಗ್ಗೆ ಆಳವಾದ ಅನುಭವವಿದೆ. ನಾವು ಹಿಂದೆ ಇದ್ದಂತಹ ಅಧ್ಯಕ್ಷರ ಜೊತೆ ಹೋಗಿ ಮಾನ್ಯ ಮುಖ್ಯಮಂತ್ರಿಗಳನ್ನು ಇದೇ ವಿಚಾರವಾಗಿ ಕಂಡುಬಂದಿದ್ದೆವು. ಈಗ ಮತ್ತೆ ತಮ್ಮ ಮುಂದಾಳತ್ವದಲ್ಲಿ ಮಾನ್ಯ ಮುಖ್ಯ ಮಂತ್ರಿಗಳನ್ನು ಕಾಣುವುದಕ್ಕೆ ಹೋಗೋಣವೆಂದು ಕರೆದರೆ ನಾವೆಲ್ಲರೂ ಬರುತ್ತೇವೆ. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿ ವಿಚಾರವನ್ನು ಮಾತನಾಡಿದ್ದೇವೆ. ಇಲ್ಲದೇ

ಇದ್ದರೆ ನಾವು ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಿಲ್ಲವೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ಇಲ್ಲಿ ಕ್ಷೇತ್ರವಾರು ಪಂಗಡಣೆ ಮಾಡಿ ಹಣ ಕೊಡುವುದರಿಂದ ನಮಗೆ ಎರಡೆರಡು ತಾಲ್ಲೂಕು ಇರುವುದರಿಂದ ಅನ್ಯಾಯವಾಗಿದೆ. ನಾನು ಅದನ್ನು ಹಲವಾರು ಸಂದರ್ಭಗಳಲ್ಲಿ ವ್ಯಕ್ತಪಡಿಸಿದ್ದೇನೆ. ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಲಿಯಿಂದ ಒಂದು ಕ್ಷೇತ್ರಕ್ಕೆ ಕೇವಲ ಎಂಟು ಸಾವಿರ ಹೆಕ್ಟೇರ್ ಇರುತ್ತದೆ. ಇನ್ನೊಂದು ಕ್ಷೇತ್ರಕ್ಕೆ ೮೦ ಸಾವಿರ ಹೆಕ್ಟೇರ್ ಬರುತ್ತದೆ. ಅದಕ್ಕೂ ಎರಡೂವರೆ, ಇದಕ್ಕೂ ಎರಡೂವರೆ ಲಕ್ಷ ರೂಪಾಯಿ ಕೊಡುತ್ತಾರೆ. ಈ ರೀತಿ ಮಾಡುವುದರಿಂದ ನಮ್ಮಂತಹವರಿಗೆ ತುಂಬಾ ಅನ್ಯಾಯವಾಗಿದೆ. ಅದನ್ನು ಬಹಳಷ್ಟು ಸಲ ಹೇಳಿದ್ದೇವೆ. ಹೋದ ಬಾರಿ ಕಮಿಟಿಯಲ್ಲಿ ಜನರಲ್ ಬಾಡಿ ಮೀಟಿಂಗ್‌ನಲ್ಲಿ ಠರಾವು ಮಾಡಿದ್ದೇವೆ ಮಾಡಿಲ್ಲವೆಂದು ಬರೆದು, ಈಗ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ದಯವಿಟ್ಟು ಕ್ಷೇತ್ರವಾರು ವಿಸ್ತೀರ್ಣದ ಆಧಾರದ ಮೇಲೆ ಹಂಚಬೇಕೆಂದು ತಮ್ಮ ಮುಖಾಂತರ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಒಂದು ವೇಳೆ ಇವರು ನಾವು ಹೇಳಿದ ರೀತಿ ಮಾಡದೇ ಇದ್ದರೆ ನಮಗೆ ಕೋರ್ಟ್‌ಗೆ ಹೋಗುವುದಕ್ಕಾದರೂ ಅವಕಾಶ ಕೊಡಿ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್. ಕೋರ್ಟ್‌ಗೆ ಹೋಗುವವರು ಇಲ್ಲಿಗೆ ಏಕೆ ಬಂದರು? ಇದರ ಬಗ್ಗೆ ನಾನು ಮಾನ್ಯ ಅಧ್ಯಕ್ಷರ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು: ಪ್ರಶ್ನೋತ್ತರ ವೇಳೆಯಲ್ಲಿ ಪಾಯಿಂಟ್ ಆಫ್ ಆರ್ಡರ್ ಇಲ್ಲ.

ಶ್ರೀ ಬಿ.ಆರ್.ನೀಲಕಂಠಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮಲೆನಾಡು ಅಭಿವೃದ್ಧಿ ಮಂಡಲಿ ವಿಚಾರದ ಬಗ್ಗೆ ಕೋರ್ಟಿಗೆ ಹೋಗುತ್ತೇವೆಂದು ಹೇಳುತ್ತಾರೆ. ಆದರೆ ಅವರು ಕೋರ್ಟಗೆ ಹೋಗುವುದಕ್ಕೆ ಬರುವುದಿಲ್ಲ ನಾವು ಸದನದಲ್ಲಿ ಏನು ರಚನೆ ಮಾಡುತ್ತೇವೋ ಅದರ ಮೂಲಕ ಸರ್ಕಾರ ಆದೇಶ ಮಾಡಿ ಕಾರ್ಯ ಮಾಡುತ್ತದೆ. ಆದುದರಿಂದ ಮಾನ್ಯ ಶಾಸಕರು ಬಾಯಿತಪ್ಪಿ ಕೋರ್ಟಿಗೆ ಹೋಗುತ್ತೇವೆಂದು ಹೇಳಿದರು. ಅಲ್ಲಿಗೆ ಹೋಗುವುದಾದರೆ ಇಲ್ಲಿಗೆ ಏಕೆ ಬಂದರು?

ಶ್ರೀ ಸಿ.ಚನ್ನಿಗಪ್ಪ: ಮಾನ್ಯ ಅಧ್ಯಕ್ಷರೇ, ಸರ್ಕಾರ ಈ ''ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ''ಯನ್ನು ಒಳ್ಳೆಯ ಉದ್ದೇಶಕ್ಕಾಗಿ ರಚನೆ ಮಾಡಿತು. ಆದರೆ ಈಗ ಇದು ಏನಾಗಿದೆ ಎಂದರೆ ಈ ಮಂಡಳಿಗೆ ಅಡ್‌ಮಿನಿಸ್ಟ್ರೇಷನ್‌ಗೆ ವಿಚಾರ್ಗುವಂಥಾದ್ದನ್ನು ಫೈನಾನ್ಸ್ ಕಮಿಟಿಯೂ ರೆಕಮೆಂಡ್ ಮಾಡಿದೆ. ಅದನ್ನು ಡಿಪಾರ್ಟ್‌ಮೆಂಟ್‌ಗೆ ಮರ್ಜ್ ಮಾಡಿ ಶಾಸಕರ ಅನುದಾನಕ್ಕೆ ಸೇರಿಸಿ ಈ ಹಣವನ್ನು

ಕೊಟ್ಟರೆ ಅನುಕೂಲವಾಗುತ್ತದೆ. ಮತ್ತೆ ಈ ರೀತಿಯ ಗೊಂದಲ ಬರುವುದಿಲ್ಲ. ಈ ವಿಚಾರವಾಗಿ ಚಿತ್ರದುರ್ಗದಲ್ಲಿ ಮೀಟಿಂಗ್‌ಗೆ ಅನೇಕ ಸಾರಿ ಕರೆಯುತ್ತಾರೆ, ಅಲ್ಲಿ ಒಂಭತ್ತು ಲಕ್ಷ ಹತ್ತು ಲಕ್ಷ ರೂಪಾಯಿಗಳೆಂದು ಹೇಳುತ್ತಾರೆ, ಇವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿ ಕೊಡಿ ಎಂದು ಹೇಳುತ್ತಾರೆ. ನಾವು ಇದನ್ನು ಕಳುಹಿಸಿ ಕೊಟ್ಟಮೇಲೆ ಅಪ್ರೂವ್ ಮಾಡುತ್ತೇವೆಂದು ಹೇಳುತ್ತಾರೆ. ನಾವು ಪ್ರಸ್ತಾವನೆಯನ್ನು ಕಳುಹಿಸಿ ಎರಡು, ಮೂರು ವರ್ಷಗಳಾದರೂ ಅಪ್ರೂವ್ ಮಾಡುವುದಿಲ್ಲ. ಆದುದರಿಂದ ನಾನು ತಮ್ಮ ಮೂಲಕ ಸರ್ಕಾರದಲ್ಲಿ ವಿನಂತಿ ಮಾಡುವುದೇನೆಂದರೆ ಈ ಫೈನಾನ್ಸ್ ಕಮಿಟಿ ಏನು ರೆಕಮೆಂಡ್ ಮಾಡಿದೆ ಅದರ ಪ್ರಕಾರ ಮರ್ಜ್ ಮಾಡಿ ಶಾಸಕರ ಕ್ಷೇತ್ರಗಳಿಗೆ ಕೊಡುವಂಥಾದ್ದು ಆಗಬೇಕು.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ: ಮಾನ್ಯ ಅಧ್ಯಕ್ಷರೆ, ಇದರಲ್ಲಿ ಏನಾಗುತ್ತಿದೆ ಎಂದರೆ ಅಲ್ಲಿ ಒಂದು ವರ್ಷ ಮೂರು ತಿಂಗಳುಗಳಿಂದ ಮಾನ್ಯ ಮೀನುಗಾರಿಕೆಯ ಸಚಿವರೇ ಸಮಿತಿಯ ಅಧ್ಯಕ್ಷರು ಆಗಿರುವುದರಿಂದ ಅವರು ಮೀಟಿಂಗ್ ಕರೆದಿದ್ದರು. ನಾವು ಕೊಡುವಂತಹ ಪ್ರಸ್ತಾವನೆಯನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಶೇ.೪೦ರಷ್ಟು ಶೇ.೬೦ರಷ್ಟು ಎಂದು ತೆಗೆದುಕೊಳ್ಳುತ್ತಾರೆ. ಈ ರೀತಿಯಾಗಿ ಅವರು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಕೆರೆಗಳು, ಹಳ್ಳಗಳು, ಎಷ್ಟು ಎಂಬುದನ್ನು ತೆಗೆದುಕೊಳ್ಳುತ್ತಾರೆ. ಇದು ಆಗಿ ಒಂದು ವರ್ಷವಾದ ನಂತರ ಇದು ಇದಕ್ಕೆ ಸೇರುವುದಿಲ್ಲವೆಂದು ಹೇಳುತ್ತಾರೆ. ತಾವು ದಯಮಾಡಿ ಹೊಸದಾಗಿ ಪ್ರಸ್ತಾವನೆಯನ್ನು ಕಳುಹಿಸಿ ಕೊಡಿ ಎಂದು ಹೇಳುತ್ತಾರೆ. ಈ ರೀತಿ ಅಭಾಸದಿಂದ ಆಗುವಂಥಾದ್ದು ಅಧಿಕಾರಿಗಳು ಮಾಡುವಂತಹ ತಪ್ಪು ಈ ರೀತಿ ಒಂದೂವರೆ ವರ್ಷವಾದ ಮೇಲೂ ಏನೂ ಆಗಲಿಲ್ಲವೆಂದರೆ ತೊಂದರೆಯಾಗುತ್ತದೆ. ಆದುದರಿಂದ ತಾವು ದಯಮಾಡಿ ಈ ಪ್ರಸ್ತಾವನೆಗಳನ್ನು ತೆಗೆದುಕೊಳ್ಳುವಂತಹ ಸಂದರ್ಭದಲ್ಲಿ ಈ ಕಾಮಗಾರಿಗಳು ಸೇರುತ್ತದೆಯೋ, ಇಲ್ಲವೋ, ಎಂಬ ವಿಚಾರವನ್ನು ಮಾಡಬೇಕೆಂದು ನನ್ನ ನಿವೇದನೆಯಾಗಿದೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಭಾಗವಿದೆ. ಮೊದಲನೆಯದಾಗಿ ''ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ'' ಎರಡನೆಯದು ''ನಬಾರ್ಡ್'' ನಾವು ಇಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಈ ಎರಡನ್ನು ಮಿಕ್ಸ್ ಮಾಡಿ ಚರ್ಚೆ ಮಾಡುವಂಥಾದ್ದು ಆಗುತ್ತದೆ. ಈ ಬಯಲುಸೀಮೆ ಪ್ರದೇಶಾಭಿವೃದ್ಧಿಗೆ ಕಳೆದ ವರ್ಷ ೬ ಕೋಟಿ ೬೦ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮಂಡಳಿ ರಚನೆಯಾದಾಗಿನಿಂದ ಈ ಮೊತ್ತ ಹೆಚ್ಚಿಗೆ ಬಿಡುಗಡೆಯಾಗಿರುವಂಥಾದ್ದು ಆಗಿದೆ. ಈಗ ಹಿಂದಿನ ಸರ್ಕಾರವಿದ್ದಾಗ ಮಂತ್ರಿಯಾಗಿದ್ದವರು ಸಭೆಯಲ್ಲಿ ಕೆಲವು

ಮಾತುಗಳನ್ನು ಹೇಳಿದ್ದಾರೆ. ಅದಕ್ಕಾಗಿ ನಾನು ಈ ವಿಚಾರವನ್ನು ಹೇಳಬೇಕಾಗಿದೆ. ಸರ್ಕಾರ ೧೯೯೫ರಿಂದ ಇಲ್ಲಿಯವರೆಗೂ ಎಷ್ಟು ಹಣವನ್ನು ಬಿಡುಗಡೆ ಮಾಡಿದೆ ಎಂಬ ಮಾಹಿತಿಯನ್ನು ಸಭೆಗೆ ಕೊಡುತ್ತೇನೆ. ೧೯೯೫-೯೬ರಲ್ಲಿ ೩ ಕೋಟಿ ೭೨ ಲಕ್ಷ ರೂಪಾಯಿಗಳನ್ನು, ೧೯೯೬-೯೭ರಲ್ಲಿ ೪ ಕೋಟಿ ೧೮ಲಕ್ಷ ರೂಪಾಯಿಗಳು, ೧೯೯೭-೯೮ರಲ್ಲಿ೫ ಕೋಟಿ೯೦ ಲಕ್ಷರೂಪಾಯಿಗಳು, ೧೯೯೮-೯೯ರಲ್ಲಿ೬ ಕೋಟಿ ೩೭ ಲಕ್ಷ ರೂಪಾಯಿಗಳು, ಕಳೆದ ವರ್ಷ ೬ ಕೋಟಿ ೬೦ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ನಾನು ಏಕೆ ಈ ಅಂಕಿಸಂಖ್ಯೆಗಳನ್ನು ಹೇಳುತ್ತಿದ್ದೇನೆಂದರೆ ಈ ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ರಚನೆಯಾದ ನಂತರ ತಾವೆಲ್ಲರೂ ಮಂತ್ರಿಗಳಾಗಿ ಕೆಲಸ ಮಾಡಿರುವವರಾಗಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ತಾವು ಈ ರೀತಿ ಹಿಂದಿನ ಸರ್ಕಾರ ಹಣ ಕೊಟ್ಟಿಲ್ಲ, ಅದಕ್ಕೆ ನಾವು ಕೊಡುವುದಿಲ್ಲವೆಂದು ಡಿಫೆನ್ಸ್ ಮಾಡುವುದು ಬೇಡ.

ಅಧ್ಯಕ್ಷರು: ಮಾನ್ಯ ಮಂತ್ರಿಯವರು ಈ ವರ್ಷ ಹೆಚ್ಚಿಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ಇದು ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರಿಲ್ಲ ಇದನ್ನು ನಬಾರ್ಡ್ ಯೋಜನೆಗೆ ಸೇರಿಸಿದ್ದೇವೆ. ಕ್ಯಾಬಿನೆಟ್ ಉಪ ಸಮಿತಿಯು ೪೪ ಕೋಟಿ ರೂಪಾಯಿಗಳಿಗೆ ಒಪ್ಪಿಗೆ ಕೊಟ್ಟಿದೆ, ನಬಾರ್ಡ್‌ನಿಂದ ೪೪ ಕೋಟಿ ರೂಪಾಯಿಗಳನ್ನು ಕೇಳಿದ್ದೇವೆ, ಅದಕ್ಕೆ ನಾರ್ಮ್ಸ್ ಇದೆ, ಅದರ ಪ್ರಕಾರ ಬರುತ್ತದೆ. ಈ ವಿಚಾರವಾಗಿ ಹೇಳುವುದಾದರೆ ಮಲೆನಾಡು ಅಭಿವೃದ್ಧಿ ಮಂಡಳಿ ಅಡಿಯಲ್ಲೂ ಇದೇ ಪ್ರಕಾರವಾಗಿ ಹಣ ಬರುವಂಥಾದ್ದು, ಲೋಕೋಪಯೋಗಿ ಇಲಾಖೆಯಲ್ಲೂ ಇದೇ ರೀತಿಯಲ್ಲಿ ಹಣ ಬರುವಂಥದ್ದು. ನಾವು ಹೊಸದಾಗಿ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಎಂದು ಆವಿಷ್ಕಾರ ಮಾಡಿರುವಂಥಾದ್ದು ಅಲ್ಲ ಎಲ್ಲಾ ಇಲಾಖೆಯಲ್ಲೂ ಒಂದೇ ರೀತಿ ಇರುವುದು. ನಮಗೆ ಏನು ಪ್ರಸ್ತಾವನೆ ಬರುತ್ತದೆ ಅದನ್ನು ನಬಾರ್ಡ್‌ಗೆ ಕಳುಹಿಸಿ ಅಲ್ಲಿಂದ ಮಂಜೂರಾತಿಯಾಗಿ ಬರಬೇಕು, ಇದಕ್ಕೆ ಸ್ವಲ್ಪ ಸಮಯಾವಕಾಶ ಬೇಕಾಗುವಂಥಾದ್ದು ಸ್ವಾಭಾವಿಕವಾಗಿದೆ. ಯಾವ್ಯಾವ ತಾಲ್ಲೂಕುಗಳಿಂದ ಯಾರ್ಯಾರು ಅಂದಾಜು ಪಟ್ಟಿಯನ್ನು ಕಳುಹಿಸಿದ್ದಾರೋ ಅದನ್ನು ನಾವು ನಬಾರ್ಡ್‌ಗೆ ಕಳುಹಿಸಿ ಕೊಟ್ಟಿದ್ದೇವೆ. ನಿಮ್ಮ ತಾಲ್ಲೂಕುಗಳಲ್ಲಿ ಇದನ್ನು ಅನುಷ್ಠಾನಗೊಳಿಸುವಂಥವರು ನಿಮ್ಮ ಜಿಲ್ಲಾ ಪಂಚಾಯತ್ ಕಾರ್ಯಕಾರಿ ಅಭಿಯಂತರರು,. ಇವರು ನಮಗೆ ಎಷ್ಟು ಬೇಗ ಕೊಡುತ್ತಾರೆ, ಅಷ್ಟು ಬೇಗ ಈ ಕೆಲಸವಾಗುತ್ತದೆ. ಇನ್ನು ಮಾನ್ಯ ಯಾವಗಲ್‌ರವರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ. ಕೆಲವು ಸಾರಿ ಒತ್ತಡಗಳು ಬಂದು ಸಬ್ ಕಮಿಟಿಯಿಂದ ಹೆಚ್ಚಿಗೆ ಹಣ ಕೊಡಲಾಗಿದೆ.

ಈ ವಿಚಾರ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಸಭೆಯಲ್ಲಿ ಚರ್ಚೆಯಾಯಿತು. ಆಗ ನಾನು ಎಲ್ಲಾ ತಾಲ್ಲೂಕುಗಳಿಗೂ ಸರಿಸಮಾನವಾಗಿ ಹಂಚುವಂತಹ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿದ್ದೇನೆ. ಎಲ್ಲಾ ಕ್ಷೇತ್ರಗಳಿಗೂ ಆದ್ಯತೆಯ ಮೇಲೆ ಸಮಾನವಾಗಿ ಹಂಚಿಕೆಯಾಗುವಂತೆ ವ್ಯವಸ್ಥೆ ಮಾಡುತ್ತೇನೆಂದು ಭರವಸೆ ಕೊಡುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಗದಗ್ ಜಿಲ್ಲೆಯ ಪ್ರಸ್ತಾವನೆಯನ್ನು ನಬಾರ್ಡ್‌ಗೆ ಕಳುಹಿಸಿ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಅದನ್ನು ಯಾವಾಗ ಕಳುಹಿಸಿದ್ದೀರಿ, ಮತ್ತೆ ಅದು ಎಷ್ಟು ದಿವಸಗಳಿಗೆ ಬರುತ್ತದೆ ಎನ್ನುವಂಥ ಮಾಹಿತಿಯನ್ನು ಕೊಡಲಿಲ್ಲ. ಮಾನ್ಯ ಮಂತ್ರಿಯವರು ತಿಳಿಸಬೇಕಾಗಿ ಕೋರುತ್ತೇನೆ.

ಶ್ರೀ ಬಿ.ರಮಾನಾಥ ರೈ: ಮಾನ್ಯ ಅಧ್ಯಕ್ಷರೆ, ನಾವು ಒಂದನೇ ಪಟ್ಟಿಯಲ್ಲಿ ಉತ್ತರವನ್ನು ಕೊಟ್ಟಿದ್ದೇವೆ. ಗದಗ್ ಜಿಲ್ಲೆಯ ವಿಚಾರವಾಗಿ ಏನೇನು ಪ್ರಸ್ತಾಪ ಮಾಡಿದ್ದಾರೆ ಅದರಲ್ಲಿ ಕೆಲವು ಕ್ಲಾರಿಫಿಕೇಷನ್‌ಗಾಗಿ ಬಂತು, ಇನ್ನೂ ಕೆಲವು ಬಂದಿಲ್ಲ.

ಹೊಳೆಹೊನ್ನೂರು ಕ್ಷೇತ್ರದಲ್ಲಿ ಪಶು ಆರೋಗ್ಯ ಕೇಂದ್ರಗಳ ಸ್ಥಾಪನೆ.

೩೨೩(೩೩೦೯)

ಶ್ರೀ ಕರಿಯಣ್ಣ(ಹೊಳೆಹೊನ್ನೂರು): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ವರ್ಷ ಎಷ್ಟು ಪಶು ಆರೋಗ್ಯ ಕೇಂದ್ರಗಳನ್ನು ತೆರೆಯಲಾಗಿದೆ?

ಆ) ಹೊಳೆಹೊನ್ನೂರು ಕ್ಷೇತ್ರ, ಭದ್ರಾವತಿ ತಾಲ್ಲೂಕು, ಶಿವಮೊಗ್ಗ ಜಿಲ್ಲೆಗಳಲ್ಲಿ ಎಷ್ಟು ಪಶು ಆರೋಗ್ಯ ಕೇಂದ್ರ ಆಸ್ಪತ್ರೆಗಳನ್ನು ತೆರೆಯಲಾಗಿದೆ?

ಇ) ಹೊಸ ಪಶುಗಳ ಆಸ್ಪತ್ರೆಗಳನ್ನು ಮಂಜೂರು ಮಾಡದಿದ್ದರೆ ಅದನ್ನು ಯಾವಾಗ ಮಾಡಲಾಗುವುದು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಇಲ್ಲ.

ಆ) ಇಲ್ಲ